Area affected by Drought due to Failure of Rains in Mysore District.

*Q.—1131. Sri D. M. SIDDAIAH (Beligere).—

Will the Government be pleased to state:—

(*a*) the area affected by drought due to failure of timely rains in Mysore District;

(*d*) the help that the Government proposes to give to those parts of the district wherein the crops have failed on account of failure of rains;

(*c*) the relief measures that have been taken by the Government;

(*d*) whether they would consider the necessity of exempting collection of land revenue from this year, in the areas wherein there is a failure of crops on account of failure of rains in the above District?

A.—Sri M. V. KRISHNAPPA (Minister for Revenue).—

(*a*)—

	Taluks	No. of villages affected for want of timely rains.
1	Mysore (Yelwal Hobli)	16
2	Gundlupet	40
3	Chamarajanagar	24
4	Kollegal	All the villages in the taluk except a few villages in Kollegal Hobli which have facilities of tank water supply.

(*b*) and (*c*) Relief measures such as restoration of gokattes, desilting of tanks, formation and repairs of roads, etc; have already been taken up in order to provide employment to the agricultural labourers. Takavi loans are also being given to the agriculturists in the affected villages.

(*d*) As the condition of crops has generally improved due to subsequent rains, the question of remission of Land Revenue may not arise. The situation is, however, being watched by the local officers and further relief measures would be taken if found necessary.

ಶ್ರೀ ಡಿ. ಎಂ. ಸಿದ್ದಯ್ಯ.—ಉತ್ತರದಲ್ಲಿ ಮಳೆಬಾರದೆ ಇರುವ ಪ್ರದೇಶಗಳು ಎನ್ನುವುದರಲ್ಲಿ ಮೈಸೂರಿನ ಯಲವಾಲ ಹೋಬಳಿಯಲ್ಲಿ 16 ಗ್ರಾಮಗಳು, ಗುಂಡ್ಲುಪೇಟೆಯಲ್ಲಿ 40, ಚಾಮರಾಜ ನಗರದಲ್ಲಿ 24, ಕೊಳ್ಳೆಗಾಲದಲ್ಲಿ ಕೆಲವು ಗ್ರಾಮಗಳನ್ನು ಬಿಟ್ಟು ಇತರ ಎಲ್ಲಭಾಗಗಳು ಎಂದು ಹೇಳಿದ್ದೀರಿ. ಹಾಗಾದರೆ ಮೈಸೂರು ಜಿಲ್ಲೆಯಲ್ಲಿರುವ ನಂಜನಗೂಡಿನಲ್ಲಿ, ಟಿ-ನರಶೀಪುರ ತಾಲ್ಲೂಕಿನಲ್ಲಿ ಹಾಗೂ ಮೈಸೂರಿನಲ್ಲಿರುವ ವರುಣ ಹೋಬಳಿಯಲ್ಲಿ ಬರಗಾಲ ಯಾವಾಗಲೂ ಇರುತ್ತದೆ ಎನ್ನುವುದು ನಿಮ್ಮ ಗಮನಕ್ಕೆ ಬಂದಿಲ್ಲವೇ?

ಶ್ರೀ ಎಂ. ವಿ. ಕೃಷ್ಣಪ್ಪ.—ಅಭಾವ ಎಲ್ಲೆಲ್ಲಿದೆ ಎನ್ನುವುದನ್ನು ಆಯಾ ಸ್ಥಳದಲ್ಲಿರುವ ಸಂಬಂಧಪಟ್ಟ ಅಧಿಕಾರಿಗಳು ಆಗಾಗ್ಗೆ ತಿಳಿಸುತ್ತಾರೆ. ಅವರಿಗೆ ಗೊತ್ತಿಲ್ಲದೆ ಇರುವ ಸ್ಥಳಗಳಿದ್ದರೆ ಅಲ್ಲೆಲ್ಲಾ ಅದಕ್ಕಾಗಿ ಇರುವ ಸಮಿತಿಗಳ ಮೆಂಬರುಗಳು ತಿಳಿಸುತ್ತಾರೆ. ಅದರಂತೆ ತಕ್ಕ ಕ್ರಮ ತೆಗೆದು ಕೊಳ್ಳುತ್ತಾರೆ.

ಶ್ರೀ ಡಿ. ಎಂ. ಸಿದ್ದಯ್ಯ.—ಮೈಸೂರು ತಾಲ್ಲೂಕಿನಲ್ಲಿರುವ ವರುಣದಲ್ಲಿ ಯಾವ ರೀತಿಯಾದ ನೀರಾವರಿ ಸೌಲಭ್ಯವೂ ಇಲ್ಲದೇ ಇರುವುದರಿಂದ ಹಾಗೂ ಇನ್ನಿತರ ಭಾಗಗಳಲ್ಲಿ ಬರಗಾಲ ಪರಿಸ್ಥಿತಿ ಇದೆ ಎನ್ನುವುದು ಅಲ್ಲಿನ ಅಧಿಕಾರಿಗಳಿಗೇ ಗೊತ್ತಿರಲಿಲ್ಲವೇ?

ಶ್ರೀ ಎಂ. ಎ. ಕೃಷ್ಣಪ್ಪ.—ಮೈಸೂರು, ಚಾಮರಾಜನಗರದ ಮಧ್ಯದಲ್ಲಿರುವ ನಂಜನಗೂಡಿನಲ್ಲಿರುವ ದೇವನೂರಿನಲ್ಲಿ ಮತ್ತು ಆ ಹೋಬಳಿಯಲ್ಲಿ ಅಭಾವದ ಪರಿಸ್ಥಿತಿ ಇದೆ ಎನ್ನುವುದನ್ನು ಅಲ್ಲಿನ ಅಧಿಕಾರಿಗಳು ನೋಡದೇ ಇದ್ದರೆ ಅಲ್ಲಿರುವ ತಮ್ಮಂತಹ ಸದಸ್ಯರುಗಳು ತೋರಿಸಿದ್ದರೆ ತಕ್ಕ ಕಾರ್ಯಕ್ರಮ ತೆಗೆದು ಕೊಳ್ಳುತ್ತಿದ್ದರು. ನಾನು ಈಗಲಾದರೂ ಅವರಿಗೆ ತಿಳಿಸುತ್ತೇನೆ ಮತ್ತು ಇದಕ್ಕಾಗಿ ಸ್ವಲ್ಪ ಪ್ರಯತ್ನ ಪಟ್ಟು ನಹಾಯ ಮಾಡಿ ಎಂದು ನಲಹೆ ಕೊಡುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಉತ್ತರದಲ್ಲಿ ತಾವು ಹೇಳಿರುವುದು : 'ತದನಂತರ ಮಳೆಯಾಗಿರುವುದರ ಪ್ರಯುಕ್ತ ಬೆಳೆಗಳ ಪರಿಸ್ಥಿತಿ ಸಾಮಾನ್ಯವಾಗಿ ಸುಧಾರಿಸಿರುವುದರಿಂದ ಭೂಕಂದಾಯವನ್ನು ಮಾಫಿ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು.'

ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ರಾಗಿ ಬಿತ್ತಿದಾರೆಯೇ, ಹುರಳಿ ಬಿತ್ತಿದಾರೆಯೇ, ಅಥವಾ ಕಡಲೆಕಾಯಿ ಏನಾದರೂ ಬೆಳೆದಿದ್ದಾರೆಯೇ ಎನ್ನುವುದಕ್ಕೆ ಅಲ್ಲಿರುವ ಅಧಿಕಾರಿಗಳಿಂದ ತಮಗೆ ವರದಿಗಳೇನಾದರೂ ಬರುತ್ತಿದೆಯೇ ಮತ್ತು ಆ ವರದಿಯನ್ನು ಡೆಪ್ಯೂಟಿ ಕಮಿಷನವರು ಕಳುಹಿಸುವ ಏರ್ಪಾಡು ಮಾಡುತ್ತಿದ್ದಾರೆಯೇ?

ಶ್ರೀ ಎಂ. ಎ. ಕೃಷ್ಣಪ್ಪ.—ಮೈಸೂರು ಡಿಸ್ಟ್ರಿಕ್ಟಿನ ಮೂರು ನಾಲ್ಕು ತಾಲ್ಲೂಕುಗಳಲ್ಲಿ ಜೂನ್ ಹಾಗೂ ಜುಲೈ ತಿಂಗಳುಗಳಲ್ಲಿ ಮಳೆ ಬಾರದೆ ಅಭಾವಕ್ಕೆ ಸಿಕ್ಕಿದೆ ಎಂದು ವರದಿ ಬಂದುದರಿಂದ ಅದಕ್ಕಾಗಿ 64 ಫ್ಯಾಮಿನ್ ಹೆಡ್ ನಿಂದ 30—30 ಸಾವಿರ ರೂಪಾಯಿಗಳಷ್ಟು ಫ್ಯಾಮಿನ್ ವರ್ಕುಗಳನ್ನು ಮಾಡಲು ಆರ್ಡರಾಗಿತ್ತು. ಪಿ. ಡಬ್ಲ್ಯು. ಡಿ. ನಲ್ಲೂ ಕೂಡ ಮೈನರ್ ಇರಿಗೇಷನ್ನು ವರ್ಕುಗಳಿಗೆ ಗೋನ್ಸರ ಹೆಚ್ಚು ಅನುಕೂಲತೋರಿಸಲು ಮತ್ತಿತರ ಡೆವಲಪ್‌ಮೆಂಟು ಕೆಲಸಗಳನ್ನೂ ಮಾಡಲು ಮತ್ತು ಕೆಲವು ಕಡೆಗಳಲ್ಲಿ ಬಾವಿ ತೆಗೆಯುಲು ಲಬರೇಸ್ಟೈಸ್ಡ್ ಸ್ಕೀಮಿನಲ್ಲಿ ನ ಲಕ್ಕಾಗಿ ಹಣವನ್ನೂ ಕೊಡಲಾಯಿತು. ಅದೂ ಅಲ್ಲದೆ ಗುಂಡ್ಲುಪೇಟೆ ಪ್ರದೇಶದಲ್ಲಿ ಹೆಚ್ಚಿನ ಕೆಲಸಗಳನ್ನು ಮಾಡಲು ಹಣಕೊಡಲಾಗಿದೆ. ಮೈಸೂರಿನ ಯಲಪಾಲದ ಬಳಿ ಬರಗಾಲ ಹೆಚ್ಚಾಗಿತ್ತು ಎಂದು ಅಲ್ಲಿಯೂ ಹೆಚ್ಚಿನ ಕೆಲಸಗಳನ್ನು ಮಾಡಬೇಕೆಂದು ಹೇಳಲಾಗಿದೆ, ಅಲ್ಲದೆ ಕಲವು ಕಡೆಗಳಲ್ಲಿ ಅಭಾವ ಹೆಚ್ಚು ಬಂದಿದೆ ಎಂದು ತಿಳಿದು ಬಂದಿರುವುದರಿಂದ ಅಂತಹ ಪ್ರದೇಶದಲ್ಲಿ ರ್ಯಾಂಡ್ ರೆವೆನ್ಯೂವನ್ನು ನಸ್‌ಪೆಂಡು ಮಾಡುವ ವಿಷಯದಲ್ಲಿ ಇನ್ನೂ ತೀರ್ಮಾನ ಮಾಡಿಲ್ಲ. ಅದು ಇನ್ನೂ ಸರಕಾರದ ಗಮನದಲ್ಲಿದೆ.

ಶ್ರೀ ಡಿ. ಎಂ. ಸಿದ್ದಯ್ಯ.—ಅಭಾವ ಪ್ರದೇಶಕ್ಕಾಗಿ ಇಲ್ಲಿಯವರೆಗೂ ಯಾವ ಯಾವ ಕ್ರಮಗಳನ್ನು ತೆಗೆದುಕೊಂಡಿದ್ದೀರಿ?

ಶ್ರೀ ಎಂ. ಎ. ಕೃಷ್ಣಪ್ಪ.—ಇಲ್ಲಿಯವರೆಗೆ ಖರ್ಚು ಮಾಡಿರುವುದನ್ನು ತಮಗೆ ಕೊಡುತ್ತೇನೆ. ಬಾವಿಗಳನ್ನು ತೆಗೆಯುವುದಕ್ಕಾಗಿ 30, 30 ಸಾವಿರ ರೂಪಾಯಿಗಳಷ್ಟು ಈ ತಾಲ್ಲೂಕುಗಳಲ್ಲಿ ಕೊಡಲಾಗಿದೆ, ಇದಲ್ಲದೆ ಮೈಸೂರು ತಾಲ್ಲೂಕಿನಲ್ಲಿ ಬೇರೆ 14 ಕೆಲಸಗಳನ್ನು ತೆಗೆದುಕೊಂಡಿದ್ದೇವೆ ಮತ್ತು ಅದಕ್ಕಾಗಿ 2,20,000 ರೂಪಾಯಿಗಳಷ್ಟು ಖರ್ಚಾಗಿದೆ ಮತ್ತು ಆ ಕೆಲಸಗಳೆಲ್ಲಾ ಮುಗಿಯುತ್ತಾ ಬಂದಿದೆ. ಗುಂಡ್ಲುಪೇಟೆ ತಾಲ್ಲೂಕಿನಲ್ಲಿ 30,000 ರೂಪಾಯಿಗಳನ್ನು ಕೊಟ್ಟು ಅಲ್ಲಿ 15 ಕೆಲಸಗಳನ್ನು ತೆಗೆದುಕೊಳ್ಳಲಾಗಿದೆ. ಅಲ್ಲಿ ಕೆಲಸ ನಡೆಯುತ್ತಿದೆ, ಅಲ್ಲದೆ ಅಲ್ಲಿ ಕೆಲವು ರಸ್ತೆಗಳನ್ನು ಮಾಡಲು ಇನ್ನೂ ಹೆಚ್ಚಾಗಿ ಎರಡು ಸಾವಿರ ರೂಪಾಯಿಗಳಷ್ಟು ಖರ್ಚು ಮಾಡಿ ಹೊನೂರು ಕಬ್ಬಳಿ ರಸ್ತೆಯನ್ನು ಕೂಡ ಮಾಡಲಾಗಿದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ತಾಲ್ಲೂಕಿನಲ್ಲಿರುವ ಅಧಿಕಾರಿಗಳು ಸರಿಯಾದ ವರದಿಗಳನ್ನು ಸರಕಾರಕ್ಕೆ ಕೊಡದೆ ಹೋದರೆ ಅಂತಹವರ ಮೇಲೆ ಏನು ಕಾಯ್ರಮ ತೆಗೆದುಕೊಳ್ಳುತ್ತದೆ ?

ಶ್ರೀ ಎಂ. ಎ. ಕೃಷ್ಣಪ್ಪ–ಆಲ್ಲೆಲ್ಲ ತಾಲ್ಲೂಕು ಬೋರ್ಡು ಮೆಂಬರುಗಳಿರುತ್ತಾರೆ. ಪ್ರತಿಯೊಂದು ತಾಲ್ಲೂಕಿನಲ್ಲೂ ಪಂಚಾಯತಿಗಳ ಮೆಂಬರುಗಳು ಎಲ್ಲ ಸೇರಿಕೊಂಡು ವಿಚಾರ ಮಾಡಿಕೊಂಡು ಅಲ್ಲಿರುವ ಪ್ರದೇಶಗಳಲ್ಲಿ ಏನು ಕಾರ್ಯ ನಡೆಯಬೇಕು ಎನ್ನುವುದನ್ನೆಲ್ಲಾ ಪರಿಶೀಲನೆ ಮಾಡಿ ವಿಚಾರ ಮಾಡುತ್ತಾರೆ. ಅದರಂತೆ ಸರಕಾರಕ್ಕೆ ವರದಿ ಕೂಡ ಬರುತ್ತದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ತುಮಕೂರಿನಲ್ಲಿ ನರಕಾರ ಕೊಟ್ಟಹಣವನ್ನೇ ಖರ್ಚು ಮಾಡದೇ ಅಲ್ಲಿರುವ ಡೆಪ್ಯುಟಿ ಕಮಿಷನರಿಗೆ ಹೇಳಿದ್ದರೂ ಸಹ ಯಾವ ಕೆಲಸವನ್ನೂ ಮಾಡದೇ ಹಣ ಹಾಗೆ ಉಳಿದಿದೆ ಎನ್ನುವುದು ಸರಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಂ. ಎ. ಕೃಷ್ಣಪ್ಪ.—ಅನೇಕ ಸಂದರ್ಭಗಳಲ್ಲಿ ಹಣ ಕೊಟ್ಟಿದ್ದರೂ ಅದು ಖರ್ಚಾಗುವುದಿಲ್ಲ. ಅಲ್ಲಿಂದ ವರದಿ ಬಂದು ಸರಕಾರದಿಂದ ಹಣ ಹೋಗುವುದರಲ್ಲಿ ಅಲ್ಲಿ ಮಳೆ ಬಂದಿರುತ್ತದೆ ಅಂತಹ ಸಂದರ್ಭಗಳಲ್ಲಿ ಅಧಿಕಾರಿಗಳು ಆ ಹಣವನ್ನು ಆಗ ಖರ್ಚು ಮಾಡದೇ ನಿಲ್ಲಿಸಿರಬಹುದು ಮಳೆ ಬಂದ

ಕೂಡಲೇ ರೈತರು ರೀಲಿಫ್ ಕೆಲಸಗಳನ್ನು ಮಾಡಲು ಬರುವುದಿಲ್ಲ, ಅವರವರ ಹೊಲದ ಕೆಲಸಗಳನ್ನು ಮಾಡಲು ಹೋಗುತ್ತಿರುತ್ತಾರೆ. ಅದರಿಂದೇನೂ ತೊಂದರೆಯಾಗುವುದಿಲ್ಲ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಮಂತ್ರಿಗಳು ಗುಂಡ್ಲುಪೇಟೆ ತಾಲ್ಲೂಕಿನಲ್ಲಿ 3,000 ರೂಪಾಯಿ ಗಳಷ್ಟು ಹಣವನ್ನು ಹೆಚ್ಚಿಗೆ ಕೊಟ್ಟು ಹೊಸೂರು-ಕಬ್ಬಳ್ಳಿ ರಸ್ತೆ ಮಾಡಿಸಿದರು ಎಂದು ಹೇಳಿದರು. ಗುಂಡ್ಲುಪೇಟೆಯಲ್ಲಿ ಕಬ್ಬಳ್ಳಿ ರಸ್ತೆ ಮಾಡಿಸಿದರೆ ನನಗೆ ಹೆನರು ಬರಬಹುದು ಎಂದು ನಂಜನಗೂಡಿನಲ್ಲಿರುವ ದೇವನೂರು ರಸ್ತೆ ಮಾಡಿಸಿದರೆ ಸಿದ್ದಯ್ಯನವರಿಗೆ ಹೆನರು ಬರಬಹು ಎಂದು ಚಾಮರಾಜನಗರದಲ್ಲಿ ರಸ್ತೆ ಮಾಡಿಸಿದರೆ ರಾಚಯ್ಯನವರಿಗೆ ಹೆನರು ಬರಬಹುದು ಎಂದು ನಾನು ಈ ಕೆಲಸಗಳನ್ನು ಮಾಡಬೇಕೆಂದು ಹೇಳುತ್ತಿಲ್ಲ. ಎಲ್ಲಾ ಜನಗಳಿಗೂ ಅನುಕೂಲವಾಗಬೇಕೆಂಬುದೇ ನನ್ನ ಉದ್ದೇಶ. ಇಂತಿಂತಹ ರೀಲಿಫ್ ವರ್ಕ್‌ಗಳನ್ನು ಮಾಡಿದರೆ ಜನಕ್ಕೆ ಅನುಕೂಲವಾಗುತ್ತದೆ ಎಂದು ತಮಗೆ ಆಯಾ ಜಿಲ್ಲೆಗಳಿಂದ ವರದಿಗಳು ಬರುತ್ತಿದೆಯೇ ಮತ್ತು ಅದರಂತೆ ಕೆಲಸಗಳು ನಡೆದಿಲ್ಲ ಎನ್ನುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಎಲ್ಲಿ ಹೆಚ್ಚಿನ ಕೆಲಸಗಳಾಗಬೇಕಾಗಿವೆಯೋ ಅಲ್ಲಿ ಅಂತಹ ಕೆಲಸ ಗಳಿಗಾಗಿ ಹಣವನ್ನು ತೆಗೆದುಕೊಂಡು ಖರ್ಚು ಮಾಡುವುದರಲ್ಲಿ ಅಭ್ಯಂತರವೇನಿಲ್ಲ. ಅಲ್ಲಿರುವ ಪಂಚಾಯಿತಿಗಳ ಹಾಗೂ ತಾಲ್ಲೂಕು ಬೋರ್ಡುಗಳ ಸಹಾಯ ಇದ್ದೇ ಇರುತ್ತದೆ. ಅಲ್ಲದೆ ಅವರೆಲ್ಲಾ ಜಿಲ್ಲಾ ಅಭಿವೃದ್ಧಿ ಸಮಿತಿಗಳಲ್ಲಿ ಸಲಹೆ ಮಾಡಿ ಸರಕಾರಕ್ಕೆ ಕಳುಹಿಸುತ್ತಾರೆ. ಅಲ್ಲದೆ ನನಗೆ ತಿಳಿದ ಹಾಗೆ ಗುಂಡ್ಲು ಪೇಟೆ ಹಾಗೂ ಚಾಮರಾಜನಗರ ತಾಲ್ಲೂಕುಗಳಲ್ಲಿ ಬಾವಿಗಳನ್ನು ತೋಡುವುದ ಕ್ಕಾಗಿ ಎರಡು ಲಕ್ಷ ರೂಪಾಯಿಗಳಷ್ಟನ್ನು ಹೆಚ್ಚಾಗಿ ಕೊಟ್ಟಿದೆ. ಒಂದು ವರ್ಷದ ಹಿಂದೆ ಇಲ್ಲಿ ಎಂಟು ಲಕ್ಷ ರೂಪಾಯಿಗಳಷ್ಟನ್ನು ಅಬರಲ್ಯೆನ್ಸ್ ಲೋನಿನಂತೆ ಬಾವಿಗಳಿಗಾಗಿ ಬೇರೆ ಕೊಡಲಾಗಿತ್ತು. ಇದರಂತೆ ಅಲ್ಲಿನ ಡೆಪ್ಯುಟಿ ಕಮಿಷನರವರು ಗಮನಕ್ಕೆ ತೆಗೆದುಕೊಂಡು ಈ ಮೂರು ತಾಲ್ಲೂಕುಗಳಲ್ಲಿ ಬಾವಿ ಕೆಲಸಗಳನ್ನು ತಗೆದುಕೊಳ್ಳುತ್ತಿದ್ದಾರೆ.

ಶ್ರೀ ಡಿ. ಎಂ. ಸಿದ್ದಯ್ಯ.—ತಕಾವಿಲೋನ್‌ನು ಕೊಡುವುದು 3 ತಾಲ್ಲೂಕಿಗೆ ಎಂದು ಹೇಳಿದಿರಿ. ಬಾಕಿ ಕೆಲವು ಸ್ಥಳಗಳಲ್ಲಿಯೂ ಆ ಡಿಸ್ಟ್ರಿಕ್ಟಿನಲ್ಲಿ ಅಭಾವ ಪರಿಸ್ಥಿತಿ ಇದೆಯೆಂದು ರಿಪೋರ್ಟು ಬರೆ ದಿದ್ದರೆ, ಅಲ್ಲಿಗೆ ರಿಲೀಫ್ ಮೆಶರ್ಸ್ ಯಾವಾಗ ಮಾಡಿಸುತ್ತಿರಾ ? ನಮ್ಮ ತಾಲ್ಲೂಕಿನ ವಿಚಾರ ಬಗೆ ಹರಿಸುತ್ತೀರ.

ಶ್ರೀ ಎಂ. ವಿ. ಕೃಷ್ಣಪ್ಪ.—ಈಗ ನಂಜನಗೂಡು ತಾಲ್ಲೂಕಿನಲ್ಲಿ ಕೆಲವು ಹೋಬಳಿಗಳಲ್ಲಿ ಅಭಾವ ಪರಿಸ್ಥಿತಿ ಇದೆಯೆಂದು ತಿಳಿದು ಫೋನ್ ಮಾಡಿ ಡಿವಿಜನಲ್ ಕಮಿಷನರಲ್ಲಿ ಮಾತನಾಡಿದ್ದೇನೆ. ಇವತ್ತು ಅವರು ಬಿ.ಡಿ.ಓ. ಮತ್ತು ತಹಸೀಲುದಾರರುಗಳ ಮೀಟಿಂಗನ್ನು ಮೈಸೂರಿನಲ್ಲಿ ಇಟ್ಟುಕೊಂಡಿದ್ದೇ ನೆಂದು ಅವರು ಹೇಳಿದರು. ಅದರಲ್ಲಿ ಏನು ನಡೆಯಿತು ಎಂದು ಬಹುಶಃ ಗೊತ್ತಾಗುತ್ತದೆ. ಅದರ ಮೇಲೆ ಪುನಃ ಹೇಳುತ್ತೇನೆ.

ಶ್ರೀ ಜಿ. ವಿ. ಗೌಡ.—ಅಭಾವ ಪರಿಸ್ಥಿತಿ ತಲೆದೋರಿದಾಗ ಪಿ.ಡಬ್ಲ್ಯು.ಡಿ. ಯವರು ಕೆರೆಗಳ ಹೂಳು ತೆಗೆಯುತ್ತಾರೆ, ತಕಾವಿಲೋನ್ ಮಂಜೂರು ಮಾಡುತ್ತೇವೆ, ನೀರಾವರಿ ಬಾವಿಗೆ ಸಾಲ ಮಂಜೂರು ಮಾಡುತ್ತೇವೆಂದು ಹೇಳಿದಿರಿ. ಕೊಳ್ಳೆಗಾಲ ತಾಲ್ಲೂಕಿನಲ್ಲಿ ಕೆಲವು ಹೋಬಳಿಗಳನ್ನು ಬಿಟ್ಟು ಇನ್ನೆಲ್ಲಾ ಹೋಬಳಿಗಳಲ್ಲಿಯೂ ಅಭಾವ ಪರಿಸ್ಥಿತಿ ಇದೆ. ಅಲ್ಲಿ ಡ್ರಾಟ್ ತೆಲೆದೋರಿದ ಮೇಲೆ ಎಷ್ಟು ಕೆರೆಗಳ ಹೂಳು ತೆಗೆಯುವುದಕ್ಕೆ ಪ್ರಾರಂಭ ಮಾಡಿದ್ದೀರಿ, ನೀರಾವರಿ ಬಾವಿಗಳಿಗೆ ಸಾಲ ಮಂಜೂರು ಮಾಡಿದ್ದೀರಿ, ತಕಾವಿಲೋನ್ ಮಂಜೂರು ಮಾಡಿದ್ದೀರಿ ಅನ್ನುವುದನ್ನು ಹೇಳಲಿಕ್ಕೆ ಬರುತ್ತದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಈಗ ಇರುವ ಕೊಶ್ಚನ್ನು ಮೈಸೂರು ಜಿಲ್ಲೆಯ ಫ್ಯಾಮಿನ್ನಿಗೆ ಸಂಬಂಧಪಟ್ಟಿದ್ದು. ಅದೂ ಅಲ್ಲದೆ ಇರಿಗೇಶನ್, ಮೈನರ್ ಇರಿಗೇಶನ್ ವಿಷಯಗಳು ಸಂಬಂಧಪಟ್ಟ ಇಲಾಖೆಗಳಿಗೆ ಗೊತ್ತಿರುತ್ತದೆ. ಗುಂಡ್ಲುಪೇಟೆ ತಾಲ್ಲೂಕಿನಲ್ಲಿ 4-5 ಕೆರೆಗಳ ಕೆಲಸ ಬಹಳ ಭರದಿಂದ ಸಾಗುತ್ತಿದೆ.

ಶ್ರೀ ಗೋಪಾಲರಾವ್ ಮುಡ್ಡಿ.—ಬದರ್ ಡಿ. ಡಿ. ಕೌನ್ಸಿಲ್ಲಿನಲ್ಲಿ ಬರೀಫಸಲು ನಷ್ಟವಾಗಿ ಹೋಗಿದೆ, ವಿಶೇಷವಾಗಿ ಕಮರ್ಷಿಯಲ್ ಕ್ರಾಪ್ ನಷ್ಟವಾಗಿದೆ ಎಂದು ರೆಸೊಲ್ಯೂಶನ್ ಮಾಡಿ, ಫ್ಯಾಮಿನ್ ರಿಲೀಫ್ ಮೆಶರ್ಸ್ ಕೇಳಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಈ ಪಶ್ನೆ ಮೈಸೂರು ಜಿಲ್ಲೆಯ 4 ತಾಲ್ಲೂಕಿಗೆ ಸಂಬಂಧಪಟ್ಟಿದ್ದು.

ಶ್ರೀ ಜಿ. ವಿ. ಗೌಡ.—ಸ್ವಲ್ಪ ಮಳೆಯಾದಮೇಲೆ ಕೊಳ್ಳೇಗಾಲ ತಾಲ್ಲೂಕಿನಲ್ಲಿ, ಹುಳು ಬಿದ್ದು ಬೆಳೆ ನಾಶವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಬೆಳೆ ಪೂರ್ಣವಾಗಿ ನಾಶವಾದಮೇಲೆ ರೆಮಿಷನ್ ಸಂಪೂರ್ಣವಾಗಿ ಮಾಡಬೇಕಲ್ಲವೆ ?

ಶ್ರೀ ಎಂ. ಎ. ಕೃಷ್ಣಪ್ಪ.—ಜೂನ್, ಜುಲೈ ತಿಂಗಳುಗಳಲ್ಲಿ ಮಳೆ ಹೋದಾಗ ಬೆಳೆ ಒಣಗಿ ಹೋಗಿತ್ತು. ಈ ಸಭೆಯ ಹಿಂದಿನ ಸೆಷನ್ ನಡೆಯುತ್ತಿದ್ದಾಗ, 8-10 ದಿನ ಮಳೆ ಬಂದು the whole picture changed. ಒಣಗಿ ಹೋದ ಬೆಳೆ ಚೆನ್ನಾಯಿತು. ಇದು ನಮ್ಮ ಜೀವನ. ಹೀಗಿರುವಾಗ, ಜೂನ್, ಜುಲೈನಲ್ಲಿ ಬೆಳೆ ಹೋದಾಗಲೆಲ್ಲಾ ಕಂದಾಯ ರೆಮಿಶನ್ ಮಾಡುವುದಕ್ಕಾಗುವುದಿಲ್ಲ. ಅಂತಿಮವಾಗಿ ಲೆಕ್ಕ ನೋಡುತ್ತೇವೆ. 12 ಆಣೆ ಕಡಿಮೆ ಇದ್ದರೆ, ಪಜಾಮಾಡುತ್ತೇವೆ, 6 ಆಣೆ ಕಡಿಮೆ ಇದ್ದರೆ ನಸ್ಪೆಂಡ್ ಮಾಡುತ್ತೇವೆ. ರೂಲ್ಸ್ ಪ್ರಕಾರ ಡಿಸೆಂಬರ್ ಜನವರಿ ತಿಂಗಳಿನಲ್ಲಿ ತೀರ್ಮಾನ ಮಾಡಬೇಕಾಗಿ ಬರುತ್ತದೆ.

ಶ್ರೀ ಬಿ. ಕೆ. ಪುಟ್ಟಯ್ಯ.—ಕೊಳ್ಳೇಗಾಲ ತಾಲ್ಲೂಕಿನಲ್ಲಿ ಇದುವರೆಗೆ ಎಷ್ಟು ಹಳ್ಳಿಗಳಿಗೆ ರಿಲೀಫ್ ಕೊಟ್ಟಿದ್ದೀರಿ. ಗುಂಡ್ಲುಪೇಟೆ ತಾಲ್ಲೂಕಿನಲ್ಲಿ 16 ಕೆಲಸಗಳಿಗೆ 3 ಸಾವಿರ ರೂಪಾಯಿ ಖರ್ಚು ಮಾಡಿದ್ದೀರಿ. ಇದು ಎಷ್ಟರಮಟ್ಟಿಗೆ ರಿಲೀಫ್ ಕೊಟ್ಟಿರಬಹುದೆಂದು ಊಹಿಸುತ್ತೀರಾ ?

ಶ್ರೀ ಎಂ. ಎ. ಕೃಷ್ಣಪ್ಪ.—ಸಾಕು; ಎರಡು ಸಾವಿರ ರೂಪಾಯಿ ಒಂದು ಗೋ ಕಟ್ಟೆಗೆ ಸಾಕು. ಕೊಟ್ಟಿರುವುದು 3 ಸಾವಿರ ಅಲ್ಲ, 30 ಸಾವಿರ ಕೊಟ್ಟಿದ್ದೇವೆ, ನೀವು ಒಂದು ಸೊನ್ನೆ ನುಂಗಿಹಾಕಿದರೆ ಏನು ಕೊಡಬೇಕು. ಗೋ ಕಟ್ಟೆಗೆ ಸಾಮಾನ್ಯವಾಗಿ 1,500-2,000 ರೂಪಾಯಿ ಖರ್ಚು ಮಾಡುತ್ತಾರೆ. ಅದರ ಜೊತೆಗೆ ದೊಡ್ಡ ದೊಡ್ಡ ಕೆರೆಗಳನ್ನು ಲಕ್ಷಾಂತರ ರೂಪಾಯಿ ಖರ್ಚಿನಲ್ಲಿ ಪಿ. ಡಬ್ಲ್ಯೂ. ಡಿ. ಯವರು ತೆಗೆದುಕೊಳ್ಳುತ್ತಾರೆ.

ಶ್ರೀ ಜಿ. ವಿ. ಗೌಡ.—ಮಳೆ ಬಂದಮೇಲೆ ಕೊಳ್ಳೇಗಾಲ ತಾಲ್ಲೂಕಿನಲ್ಲಿ ಬೆಳೆಗಳಿಗೆ ಯಾವುದೋ ಹುಳು ಬಿದ್ದು ಅವು ಪೂರ್ತಿಯಾಗಿ ನಾಶವಾಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎಂ. ಎ. ಕೃಷ್ಣಪ್ಪ.—ಈಗ ತಾವು ಹೇಳುತ್ತಿದ್ದೀರಿ. ಹಾಗಿದ್ದರೆ ಆ ವಿಷಯದಲ್ಲಿ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್. ಸುಬ್ಬಯ್ಯ ನಾಯಕ್.— (*b*) ಮತ್ತು (*c*) ನಲ್ಲಿ ತಾತ್ಕಾಲಿಕ ಪರಿಹಾರ ತೆಗೆದು ಕೊಂಡಿರುವುದನ್ನು ಹೇಳಿದ್ದೀರಿ. ಖಾಯಂ ಪರಿಹಾರ, ನೀರಾವರಿ ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲವೇ ?

ಶ್ರೀ ಎಂ. ಎ. ಕೃಷ್ಣಪ್ಪ.—ಹೌದು. ಆ ಪ್ರದೇಶದಲ್ಲಿ ಭಾರಿ ಭಾರಿ ಮೀಡಿಯಂ ಇರಿಗೇಶನ್ ವರ್ಕ್ಸ್ ಮೈನರ್ ಇರಿಗೇಶನ್ ಟ್ಯಾಂಕುಗಳ ಕೆಲಸವನ್ನು 2-3 ಲಕ್ಷ ರೂಪಾಯಿ ಖರ್ಚಿನಲ್ಲಿ ತೆಗೆದುಕೊಂಡಿದೆ. ಮಾನ್ಯ ಮುಖ್ಯ ಮಂತ್ರಿಗಳು ಹೋದ ತಿಂಗಳು ಒಂದು ಕೆಲಸವನ್ನು ಪ್ರಾರಂಭ ಮಾಡಿದರು. ಇನ್ನೂ ಕೆಲವು ಗುಂಡ್ಲುಪೇಟೆ ಪ್ರದೇಶದಲ್ಲಿ ಭರದಿಂದ ಸಾಗುತ್ತಿವೆ. ಕೊಳ್ಳೇಗಾಲ ತಾಲ್ಲೂಕಿನಲ್ಲಿಯೂ ಫ್ಯೆನಾನ್ಸ್ ಮಿನಿಸ್ಟರು ಒಂದು ಕೆರೆ ಕೆಲಸವನ್ನು ಪ್ರಾರಂಭ ಮಾಡಿದರು. ಈ ರೀತಿ 6-10-12 ಲಕ್ಷ ರೂಪಾಯಿ ಖರ್ಚುಮಾಡಿ ಭಾರಿ ಭಾರಿ ಕೆರೆಗಳನ್ನು ಪ್ರಾರಂಭಿಸಿದ್ದೇವೆ. ಚಾಮರಾಜನಗರ ತಾಲ್ಲೂಕಿನಲ್ಲಿಯೂ ಒಂದೆರಡು ಕೆರೆಗಳನ್ನು ಮಾಡಬೇಕೆಂದು ಏರ್ಪಾಡಿಟ್ಟುಕೊಂಡು ಬಂದಿದ್ದೇವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಬಾಕಿದೆಲ್ಲ ಬೇಡ. ಗುಂಡ್ಲುಪೇಟೆ ತಾಲ್ಲೂಕಿಗೆ ಬಾಬಿಗಾಗಿ ಮೂರು ಲಕ್ಷ ರೂಪಾಯಿನ ಲೋನ್ ರಿಕಾರ್ಡ್ ತಯಾರಾಗಿ ರೆಡಿಯಾಗಿದೆ ಅದನ್ನು ಯಾವಾಗ ಕಟ್ಟಿಸುತ್ತೀರ ?

ಶ್ರೀ ಎಂ. ಎ. ಕೃಷ್ಣಪ್ಪ.—ನಾನು ನಿನ್ನೆ ಫೋನ್ ಮಾಡಿ, ಈ ಮೂರು ತಾಲ್ಲೂಕುಗಳಿಗೂ ಲಿಬರಲೈಸ್ಡ್ ಸ್ಕೀಮ್ಸ್ ಮಾಡಿ, 2 ಲಕ್ಷ ರೂಪಾಯಿ ಅಡಿಷನಲ್ ಫಂಡ್ ಕೊಡುತ್ತೇವೆಂದು ಡಿವಿಜನಲ್ ಕಮಿಷನರಿಗೆ ಹೇಳಿದ್ದೇನೆ. ಹೋದ ತಿಂಗಳು 8 ಲಕ್ಷ ರೂಪಾಯಿ ಕಳುಹಿಸಿದ್ದೇವೆ. ನಾಳೆ ದಿವಸ ಅಥವಾ ನಾಡಿದ್ದು ಏನಾದರೂ ಏರ್ಪಾಡು ಮಾಡಬಹುದು.

ಶ್ರೀ ಡಿ. ಎಂ. ಸಿದ್ಧಯ್ಯ.—ನಮ್ಮಲ್ಲಿ ಸಬ್‌ಸಿಕ್ಕೆಂಟ್ ಮಳೆ ಬಂದಾಗ, ಕ್ರಾಪ್ಸ್ ಇಂಪ್ರೂವ್ ಆಗಲಿಲ್ಲ. ಭೂಮಿ ಹಸಿರು ಆಯಿತು, ಅಷ್ಟೆ; ಸಬ್‌ಸಿಕ್ಕೆಂಟ್ ಆಗಿ ಮಳೆ ಬಂದರೂ ಫಸಲು ಹೋಗಿದೆ. ಆದ್ದರಿಂದ ನಮ್ಮಲ್ಲಿಗೆ ಕಂದಾಯದ ರೆಮಿಶನ್ ಕೊಡುವುದಕ್ಕೆ ಯೋಚನೆ ಮಾಡಿದ್ದೀರ ?

ಶ್ರೀ ಎಂ. ಎ. ಕೃಷ್ಣಪ್ಪ.—ಕೆಲವು ಪ್ರದೇಶಗಳಲ್ಲಿ ಆ ರೀತಿ ಅನ್ಯಾಯವಾಗಿರುವುದು ಸರಕಾರದ ಗಮನದಲ್ಲಿದೆ. ಆ ಬಗ್ಗೆ ರಿಪೋರ್ಟ್ ತರಿಸಿಕೊಳ್ಳುತ್ತೇವೆ. ನ್ಯಾಯವಾಗಿ ನಷ್ಟವಾಗಿದ್ದರೆ ಪರಿಹಾರ ಕೊಡುತ್ತೇವೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಗೋಕಟ್ಟೆಗಳಿಗೆ ಹಣ ಒದಗಿಸಲು ಬಜೆಟ್ಟಿನಲ್ಲಿ ಯಾವ ಹೆಡ್ಡಿನಲ್ಲಿಯೂ ಅವಕಾಶವಿಲ್ಲ. ಮಳೆ ಬರದಿದ್ದಾಗ ಏನೋ ಅಲ್ಪ ಸ್ವಲ್ಪ ಕೆಲವು ಸಾರಿ ಇದಕ್ಕೆ ಕೊಡುತ್ತೀರ. ಅವರ ಜೊತೆಗೆ ಗೋಕಟ್ಟೆಗಳಿಗೆ ದೇಶಾದ್ಯಂತ್ಯ ಎಲ್ಲೆಲ್ಲಿ ಮಳೆ ಆಗುವುದಿಲ್ಲವೊ, ಅಲ್ಲಿಗೆಲ್ಲಾ ಹಣ ಕೊಡಿಸುವುದಕ್ಕೆ ಪ್ರಯತ್ನ ಮಾಡುತ್ತೀರ ?

ಶ್ರೀ ಎಂ. ವಿ. ಕೃಷ್ಣಪ್ಪ.—ಈಗ ಎಲ್ಲೆಲ್ಲಿ ಅಭಾವ ಪರಿಸ್ಥಿತಿ ಬರುತ್ತದೆಯೋ ಅಲ್ಲಿ ಮಾಡಿಸುತ್ತಿದ್ದೇವೆ. ಹಿಂದೆ ಹಣ ಕೊಟ್ಟಿದ್ದರಲ್ಲಿ ರಸ್ತೆಗಳ ಹಾಗೆ ಮಣ್ಣು ಹಾಕಿ ಮಾಡುತ್ತಿದ್ದು, ಬಹಳ ಹಣ ವ್ಯರ್ಥವಾಗುತ್ತಿತ್ತು. ಈ ವರ್ಷದಿಂದ ಮಣ್ಣಿನ ಕೆಲಸದ ಜೊತೆಗೆ, ಭದ್ರವಾದ ಗೋಕಟ್ಟೆ ಮಾಡುತ್ತೇವೆ. ಕಲ್ಲು ಕಟ್ಟಡ ಕಟ್ಟಿ, ಸಿಮೆಂಟ್ ಫಿನಿಶ್ ಕೊಡುತ್ತಾರೆ. ಇದನ್ನು ಕ್ಷಾಮ ಬಂದಾಗ ಮಾತ್ರ ಮಾಡಬೇಕೆಂದಿಲ್ಲ. ಎಲ್ಲೆಲ್ಲಿ ಕ್ಷಾಮ ಬರುತ್ತದೆಯೋ ಅಲ್ಲಿ ಈ ಕೆಲಸ ನಡೆಯುತ್ತದೆ. ಈ ಗೋಕಟ್ಟೆಗೆ ಎರಡು ಸಾವಿರ ರೂಪಾಯಿ ಸಾಕು. 5-6ನೂರು ರೂಪಾಯಿನಲ್ಲಿ ಕುಂಟೆಗೆ ಮಣ್ಣಿನ ಕೆಲಸವಾಗುತ್ತದೆ. ಬಾಕಿ ಹಣದಲ್ಲಿ ರಿವೆಟ್ ಮಾಡುವುದರಿಂದ ಭದ್ರವಾದ ಕೆಲಸವಾಗುತ್ತದೆ.

ಶ್ರೀ ಜಿ. ವಿ. ಗೌಡ.—ನಾಲ್ಕಾರು ವರ್ಷಗಳಿಂದಲೂ ಕೂಡ ಕೊಳ್ಳೇಗಾಲ ತಾಲ್ಲೂಕು ಅಭಾವ ಪರಿಸ್ಥಿತಿಗೆ ತುತ್ತಾಗಿ, ಅಲ್ಲಿಯ ಜನರ ಸ್ಥಿತಿ ಹೇಳಲಿಕ್ಕೆ ಬರದಷ್ಟು ಹದಗೆಟ್ಟು ಹೋಗಿದೆ. ಈ ತಾಲ್ಲೂಕಿನಲ್ಲಿ ಕೆಲವು ಖಾಯಂ ಪರಿಹಾರ ಕೊಡಲಿಕ್ಕೆ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೀರ? ನಮ್ಮ ಪರ ಕಪ್ಪವನ್ನು ಆಗಿಂದಾಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೂ ತರುತ್ತಾ ಇದ್ದೇವೆ. ನಾಲ್ಕೈದು ಪೀಡಿಯಮ್ ನೀರಾವರಿ ಕೆರೆಗಳನ್ನ ತೀವ್ರವಾಗಿ ಮಾಡುವುದಕ್ಕೆ ಸರ್ಕಾರದವರು ಒಪ್ಪುತ್ತಾರೆಯೇ?

ಶ್ರೀ ಎಂ. ವಿ. ಕೃಷ್ಣಪ್ಪ.—ಹೌದು ಸ್ವಾಮಿ, ಕೊಳ್ಳೆಗಾಲ ತಾಲ್ಲೂಕಿನಲ್ಲಿ ಬಹಳ ಹೊಳೆಗಳಿಗೆ ಅಣೆಕಟ್ಟುಗಳು ಇಲ್ಲದೆ ಬಹಳ ನೀರನ್ನು ವ್ಯರ್ಥವಾಡುತ್ತಾ ಇದ್ದಾರೆ. ಅಲ್ಲಿ ಒಳ್ಳೆಯ ಭೂಮಿ ಇದೆ. ರೈತರೂ ಚೆನ್ನಾಗಿದ್ದಾರೆ. ಹಿಂದೆ ಮದ್ರಾಸ್ ಸರಕಾರದವರು ನೆಗ್ಲೆಕ್ಟ್ ಮಾಡುತ್ತಾ ಬಂದಿರುವುದರಿಂದ, ಬಾಕಿ ತಾಲ್ಲೂಕುಗಳಿಗಿಂತಲೂ ಈ ತಾಲ್ಲೂಕು, ಪಾಪ, ಹೀನಸ್ಥಿತಿಯಲ್ಲಿದೆ.

Siddasamudra Irrigation Project in Bailhongal Taluk.

*Q.—1204. Sri M. N. NAGHNOOR (Sampagaon II).—

Will the Government be pleased to state :—

(*a*) when the Siddasamudra Irrigation Project in Bailhongal Taluk, Belgaum District was sanctioned ;

(*b*) the total estimate of the same ;

(*c*) the outlay up-to-date ;

(*d*) the total area to be irrigated under the project ;

(*e*) the total area brought under the irrigation, so far ?

A.—Sri ALUR HANUMANTHAPPA (Deputy Minister for Minor Irrigation).—

(*a*) During March 1959.

(*b*) Rs. 9,84,680.

(*c*) The outlay to end of October 1963 is Rs. 6,87,007.

(*d*) 1,250 acres.

(*e*) Since the work is still in progress, no irrigation is possible till completion.

Sri M. N. NAGHNOOR.—May I know the programme that was contemplated to complete this project ?

Sri ALUR HANUMANTHAPPA.—During the current working season of this year by May, we hope that the channel work and drainage work would be completed. Soon after that, lands will be irrigated.

Sri M. N. NAGHNOOR.—What is the nature of work that is pending because the estimate is of the order of 10 lakhs and the outlay so far is only 6—7 lakhs ?